ಇನ್ನೊಂದನ್ನು ಪರಿಶೀಲನೆ ಮಾಡುತ್ತೇನೆ. ಅದೂ ಕೂಡ ಅಗತ್ಯವಿದೆ ಎಂದು ಕಂಡುಬಂದರೆ ಖಂಡಿತ ಮಾಡಿಕೊಡುತ್ತೇನೆ.

ಪ್ರ. ಸಂ. 127 (1454)

(ಮಾನ್ಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾರವರು ಸದನದಲ್ಲಿ ಹಾಜರಿರಲಿಲ್ಲ)

ಮಂಜೂರಾಗಿರುವ ಸಾಲ

128 (1424 ಮತ್ತು 1449); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ & ವಿನಯ ಕುಲಕರ್ಣಿ (ರಾಯಭಾಗ & ಧಾರವಾಡ)

(ಅ) ಇಲಾಖೆಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಯೋಜನೆಗಳಿಗೆ ಹಾಗೂ ಡಿ. ದೇವರಾಜ ಅರಸು ಅಭಿವೃದ್ಧಿ ನಿಗಮಗಳಲ್ಲಿ ಫಲಾನುಭವಿಗಳಿಗೆ ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; ಮಂಜೂರಾದ ಸಾಲ ನೀಡಲು ಬ್ಯಾಂಕುಗಳು ಹಿಂದೇಟು ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸಾಲ ಮಂಜೂರಾದ ಫಲಾನುಭವಿಗಳಿಗೆ ಬ್ಯಾಂಕಿನ ವತಿಯಿಂದಲ್ಲದೆ ಇಲಾಖೆ ವತಿಯಿಂದ ಚೆಕ್ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

(ಅ) ಪರಿಶಿಷ್ಟ ಜಾತಿಗೆ ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ, ಪರಿಶಿಷ್ಟ ಪಂಗಡಕ್ಕೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಹಾಗೂ ಹಿಂದುಳಿದ ವರ್ಗಕ್ಕೆ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಿಂದ ಬ್ಯಾಂಕುಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಯೋಜನೆ ಮತ್ತು ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ

ಗೊಳಿಸಲಾಗುತ್ತಿದೆ. ಬ್ಯಾಂಕುಗಳು ಸಾಲ ಮಂಜೂರು ಮಾಡದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಆಯಾ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕ ರುಗಳು / ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಆಯಾ ಬ್ಯಾಂಕುಗಳಿಗೆ ಭೇಟಿ ನೀಡಿ ಫಲಾನುಭವಿಗೆ ಸಾಲ ಮಂಜೂರು ಮಾಡಿಸಲು ಪ್ರಯತ್ನಿಸಲಾಗುವುದು. ಮುಂದುವರೆದು, ಜಿಲ್ಲಾ ಮಟ್ಟದಲ್ಲಿ ನಡೆಯುವ District level Bankers Committee Meeting ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಯುವ Block Level Bankers Committee Meeting ಗಳಲ್ಲಿ ವಿಷಯಗಳನ್ನು ಪ್ರಸ್ತಾಪಿಸಿ ಸಾಲವನ್ನು ಮಂಜೂರು ಮಾಡಿಸಿ ಫಲಾನುಭವಿಗಳಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ವಹಿಸಲಾಗುತ್ತಿದೆ. ಮುಂದುವರೆದು ರಾಜ್ಯಮಟ್ಟದಲ್ಲಿ ನಡೆಯುವ State Level Bankers Committee Meeting ಗಳಲ್ಲಿಯೂ ಬ್ಯಾಂಕುಗಳಿಗೆ ನಿಗದಿಪಡಿಸಿರುವ ಗುರಿಗಳನ್ವಯ ಸಾಲವನ್ನು ಫಲಾನುಭವಿಗಳಿಗೆ ಮಂಜೂರು ಮಾಡಿಸಲು ನಿರ್ದೇಶನಗಳನ್ನು ಸಂಬಂಧಪಟ್ಟ ಬ್ಯಾಂಕುಗಳ ಮುಖ್ಯಸ್ಥರಿಂದ ಕೊಡಲಾಗುತ್ತಿದೆ.

(ಆ) ನಿಗಮಗಳ ವತಿಯಿಂದ ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಿರುವ ಅರ್ಜಿದಾರರಿಗೆ ಬ್ಯಾಂಕಿನಿಂದ ಸಾಲ ಮಂಜೂರು ಮಾಡಿದ ನಂತರ ಸಹಾಯಧನವನ್ನು ಬ್ಯಾಂಕಿಗೆ ಬ್ಯಾಂಕಿನಿಂದ ಮಂಜೂರಾದ ಸಾಲದ ಮೊತ್ತ ಹಾಗೂ ನಿಗಮದಿಂದ ಮಂಜೂರು ಮಾಡಿದ ಸಹಾಯಧನ ಸೇರಿಸಿ ಬ್ಯಾಂಕಿನಿಂದ ಸರಬರಾಜುದಾರರ ಹೆಸರಿಗೆ ಚೆಕ್ ನೀಡಿ ಸ್ವತ್ತನ್ನು ಖರೀದಿಸಿ ಫಲಾನುಭವಿಗೆ ನೀಡಲಾಗುತ್ತಿದೆ. ಇದರಿಂದಾಗಿ ಚೆಕ್ಕನ್ನು ನಿಗಮದಿಂದ ನೇರವಾಗಿ ಫಲಾನುಭವಿ ವಿತರಿಸಲು ಬರುವುದಿಲ್ಲ.

ಶ್ರೀ ವಿನಯ ಕುಲಕರ್ಣಿ: ಮಾನ್ಯ ಅಧ್ಯಕ್ಷರೆ, ನಮ್ಮ ಮತ ಕ್ಷೇತ್ರದಲ್ಲಾಗಲಿ, ಎಲ್ಲಾ ಶಾಸಕರ ಕ್ಷೇತ್ರದಲ್ಲಿ ಈ ಸಮಸ್ಯೆ ಇದೆ. ಬಹಳ ದಿವಸಗಳಿಂದ SC/ST ಗಳಿಗಾಗಲಿ, ವಾಲ್ಮೀಕಿ ಸಮಾಜದವರಿಗಾಗಲಿ ಬ್ಯಾಂಕ್‌ನವರು ಸಾಲ ಕೊಡುವುದಕ್ಕೆ ತುಂಬಾ ಹಿಂದೇಟು ಹಾಕುತ್ತಿದ್ದಾರೆ. ನಿಜವಾಗಿಯೂ ತಾವು ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ತಾಲ್ಲೂಕುವಾರು ಅಧಿಕಾರಿ

ಗಳಿಗೆ ಪರಿಶೀಲನೆ ಮಾಡಿ ತಾವು ಎಷ್ಟು ಸಾಲ ಮಂಜೂರು ಮಾಡಿದ್ದೀರಿ, ಎಷ್ಟು ಸಾಲಗಳನ್ನು ಬ್ಯಾಂಕ್‌ನವರು ಕೊಟ್ಟಿದ್ದಾರೆನ್ನುವುದನ್ನು ತಮ್ಮ ಹತ್ತಿರ report ಇರಬೇಕಾಗುತ್ತದೆ. ತಾವು ಆ report ಅನ್ನು ಒದಗಿಸುವುದಕ್ಕೆ ಸಾಧ್ಯವೇ ಎಂದು ಕೇಳುತ್ತಿದ್ದೇನೆ.

ಶ್ರೀ ಹೆಚ್. ಆಂಜನೇಯ: ನಾವು ನಿರ್ದಿಷ್ಟವಾದ ಗುರಿ ಇಟ್ಟುಕೊಂಡು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ, ಅಂಬೇಡ್ಕರ್ ಅಭಿವೃದ್ಧಿ ನಿಗಮ ದಿಂದ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಸಾಲವನ್ನು ಮಂಜೂರು ಮಾಡುತ್ತೇವೆ. ಅದರ ಅಧ್ಯಕ್ಷರೇ ಶಾಸಕರು. ಅದರ ಪ್ರಕಾರ ಮಂಜೂರಾಗುತ್ತದೆ. ಬ್ಯಾಂಕುಗಳಿಗೆ ಕಳುಹಿಸುತ್ತೇವೆ, ಬ್ಯಾಂಕ್‌ನವರು ಕೊಡಲೇಬೇಕು. ಬ್ಯಾಂಕ್‌ನವರು ಕೂಡದೇ ಹೋದರೆ ಅಲ್ಲಿ ಜಿಲ್ಲಾಧಿಕಾರಿಗಳ ಒಂದು ಸಮಿತಿ ಇದೆ. Bankers ಅನ್ನು ಕರೆದು, ಏಕೆ ಕೊಟ್ಟಿಲ್ಲ ಎಂದು ಅವರೂ ಕೂಡ ಕೇಳಬಹುದು. ನಿರ್ದಿಷ್ಟವಾಗಿ ಯಾವ ಬ್ಯಾಂಕ್‌ನಲ್ಲಿ ಕೊಟ್ಟಿಲ್ಲವೆಂದು ನನಗೇನಾದರೂ ಮಾನ್ಯ ಶಾಸಕರು ಬರೆದುಕೊಟ್ಟರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಹೇಳಿ Bankers ಹತ್ತಿರವೂ ಮಾತನಾಡಿಸಿ ಅವರಿಗೆ ಸಾಲ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

(ಗೊಂದಲ)

ಶ್ರೀ ಎನ್. ಹೆಚ್. ಕೋನರೆಡ್ಡಿ: ಯಾವ ಬ್ಯಾಂಕ್‌ನವರೂ ಕೊಡುತ್ತಿಲ್ಲ.

(ಗೊಂದಲ)

ಶ್ರೀ ಎಸ್. ಚಿಕ್ಕಮಾದು: ಯಾವ ಬ್ಯಾಂಕ್‌ನವರೂ ಕೊಡುತ್ತಿಲ್ಲ.

(ಗೊಂದಲ)

ಶ್ರೀ ಎಸ್. ಚಿಕ್ಕಮಾದು: 10ಕ್ಕೆ ಕಳುಹಿಸಿದರೆ 2 ಮಾಡುತ್ತಾರೆ, 8 ಮಾಡುವುದಿಲ್ಲ,

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಇರಿ.

(ಗೊಂದಲ)

ಶ್ರೀ ಬಿ. ಆರ್. ಪಾಟೀಲ್: Bankers ಮೇಲೆ ಕ್ರಮ ಕೈಗೊಳ್ಳಲಿಕ್ಕೆ ಇವರಿಗೆ ಅಧಿಕಾರವಿಲ್ಲ.

ಅಧ್ಯಕ್ಷರು: ಮಾನ್ಯ ಸಚಿವರೆ, ಮಾನ್ಯ ಶಾಸಕರು ಬಹಳ ಆತಂಕ ವ್ಯಕ್ತಪಡಿಸಿದ್ದಾರೆ, ಅದು ನಿಜ. ನಮ್ಮಲ್ಲಿ ಅದು ಆಗಿದೆ. ದಯವಿಟ್ಟು, Land Bank ಯಾರಿದ್ದಾರೆ, ಅವರನ್ನು Chief Secretary, ನೀವು ಕರೆದು ಕೂರಿಸಿ ಕೊಂಡು ಅವರಿಗೆ warn ಮಾಡಿ, ನೀವು ಕೊಡಲೇಬೆಕು, ಕೇಂದ್ರ ಸರ್ಕಾರದ ಆದೇಶ ಕೂಡ ಇದೆ, ಅದಕ್ಕೋಸ್ಕರ ಹೇಳಿ. ತಪ್ಪಿದರೆ ನಿಮ್ಮ ಮೇಲೆ ಕ್ರಮ ಜರುಗಿಸಬೇಕಾಗುತ್ತದೆಂದು ಹೇಳಿ. ನೋಡಿ ಆ ತರಹ. . . .

(ಗೊಂದಲ)

ಶ್ರೀ ಎನ್. ಹೆಚ್. ಕೋನರೆಡ್ಡಿ: ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: ರಾಜ್ಯ ಸರ್ಕಾರದ SC/ST ಹಣವನ್ನು ಉಪ ಯೋಗ ಮಾಡದೇ ಇದ್ದರೆ ಅಥವಾ ಸದುಪಯೋಗ ಮಾಡದೇ ಇದ್ದರೆ ಅವರ ಮೇಲೆ action ತೆಗೆದುಕೊಳ್ಳಬೇಕು, ಜೈಲಿಗೆ ಹಾಕಬೇಕು. ಇಲ್ಲಿ ಶಾಸನ, ಕಾನೂನು ತಂದಿದ್ದಾರೆ. ಬ್ಯಾಂಕ್‌ನವರು ನಮ್ಮ ವ್ಯಾಪ್ತಿಗೆ ಬರುವುದಿಲ್ಲ.

ಅಧ್ಯಕ್ಷರು: ಜೈಲಿಗೆ ಹಾಕಬೇಕೆಂದು ಇದೆಯೇ?

ಶ್ರೀ ಕೆ. ಶಿವಮೂರ್ತಿ: ಹೌದು, ಜೈಲಿಗೆ ಹಾಕಬೇಕೆಂದು ಇದೆ.

ಅಧ್ಯಕ್ಷರು: ಎಲ್ಲಿ?

ಶ್ರೀ ಕೆ. ಶಿವಮೂರ್ತಿ: ಅದರಲ್ಲಿದೆ, ಯಾರು ತಪ್ಪಿತಸ್ಥರೋ ಅವರನ್ನು ಜೈಲಿಗೆ ಹಾಕಬಹುದು ಎಂದು ಇದೆ.

ಅಧ್ಯಕ್ಷರು: ಹೇಳಿ.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಇರಿ.

ಶ್ರೀ ಬಿ. ಆರ್. ಪಾಟೀಲ್: ಮಾನ್ಯ ಮುಖ್ಯಮಂತ್ರಿಯವರು ಒಂದು ಸಭೆ ಕರೆಯಬೇಕು.

ಅಧ್ಯಕ್ಷರು: ಸಾಮಾನ್ಯವಾದ ಪ್ರಶ್ನೆ ಇದೆ. ಇದರ ಬಗ್ಗೆ ಈ commercial bank ನವರು ತಾತ್ಸಾರ ಮಾಡುತ್ತಿರತಕ್ಕಂಥದ್ದು ನಿಜ ಇದೆ. ಅದರಲ್ಲೇನೂ ಭಿನ್ನಾಭಿಪ್ರಯವಿಲ್ಲ. ಅದಕ್ಕೆ ಮಾನ್ಯ ಮಾನ್ಯ ಮಂತ್ರಿಗಳು ಒಂದು ನಿರ್ದಿಷ್ಟವಾದಂಥ ಕಠಿಣವಾದಂಥ ಕ್ರಮವನ್ನು ನೀವು ಕೈಗೊಳ್ಳಲೇಬೇಕು. ಇಷ್ಟಕ್ಕೆ ನಾನು ನಿಮ್ಮ ಪರವಾಗಿ ಇದ್ದೇನೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: ಬ್ಯಾಂಕ್‌ನವರು ಇವರ ವ್ಯಾಪ್ತಿಗೆ ಬರುವುದಿಲ್ಲ.

(ಗೊಂದಲ)

ಶ್ರೀ ಬಿ. ಆರ್. ಪಾಟೀಲ್: ಮಾನ್ಯ ಮುಖ್ಯಮಂತ್ರಿಯವರು ಮೀಟಿಂಗ್ ಕರೆಯಬೇಕು.

(ಗೊಂದಲ)

ಶ್ರೀ ಬಿ. ಬಿ. ನಿಂಗಯ್ಯ: ಆಸ್ಥೆ ವಹಿಸಿದರೆ ಮಾತ್ರ ಪ್ರಯೋಜನವಾಗುತ್ತದೆ.

ಶ್ರೀ ಬಿ. ಆರ್. ಪಾಟೀಲ್: ಮಾನ್ಯ ಮುಖ್ಯಮಂತ್ರಿಯವರು ಒಂದು ಮೀಟಿಂಗ್ ಕರೆಯಲಿಕ್ಕೆ ಹೇಳಿ ಸರ್. Bankers ಯಾರ ಮಾತೂ ಕೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಆಯಿತು, ಸಾಕು ಬಿಡಿ. ಅವರಿಗೆ ಸ್ವಲ್ಪ ಅವಕಾಶ ಕೊಡೋಣ.

(ಗೊಂದಲ)

ಶ್ರೀ ಬಿ. ಆರ್. ಪಾಟೀಲ್: ಫಲಾನುಭವಿಗಳಿಗೆ ಹಣ ಸಿಗುತ್ತಿಲ್ಲ.

ಅಧ್ಯಕ್ಷರು: ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬ್ಯಾಂಕುಗಳಿವೆ. ಕೇಂದ್ರ ಸರ್ಕಾರದ ಸೂಚನೆಗಳಿವೆ ಅದಕ್ಕೆ ಮಾನ್ಯ ಮಂತ್ರಿಗಳು ಇದರ ಬಗ್ಗೆ ಒಂದು ವಿಶೇಷವಾದ ಪ್ರಯತ್ನ ಮಾಡುತ್ತಾರೆ ನಿಮ್ಮ ಪರವಾಗಿ.

(ಗೊಂದಲ)

ಅಧ್ಯಕ್ಷರು: ಆಯಿತು.

ಶ್ರೀ ಸಿ. ಎನ್. ಬಾಲಕೃಷ್ಣ: ನೇರ ಸಾಲ ಕೊಡಿಸುವುದಕ್ಕೆ ಅವಕಾಶ ಮಾಡಿಕೊಟ್ಟುಬಿಡಿ. ಮಾನ್ಯ ಸಚಿವರು ನೇರ ಸಾಲಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು: ಆಯಿತು. Take it up seriously. ಏಕೆಂದರೆ, ನಮ್ಮ Officers ಅಷ್ಟೇ, ಅವರನ್ನು ಕರೆಸಿ ನೀವು ಕುಳೀತುಕೊಂಡು ಒಂದು ಸಾರಿ warn ಮಾಡಬೇಕು. ಇಲ್ಲದಿದ್ದರೆ ಸರ್ಕಾರದ ಯಾವ ಸವಲತ್ತೂ ಅವರಿಗೆ ಸಿಗುವುದಿಲ್ಲ ಎಂದು ಹೇಳಿಬಿಡಿ.

ಶ್ರೀ ಹೆಚ್. ಆಂಜನೇಯ: ಆಯಿತು, ಸರ.

ಡಯಾಲಿಸಿಸ್ ಕೇಂದ್ರಗಳು

129 (400); ಶ್ರೀ ಮುನಿರಾಜು ಎಸ್. (ದಾಸರಹಳ್ಳಿ)

(ಅ) ರಾಜ್ಯದ ಯಾವ ಯಾವ ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಲಭ್ಯವು ಲಭ್ಯವಿರುತ್ತದೆ ಮತ್ತು ಡಯಾಲಿಸಿಸ್‌ಗೆ ವಿಧಿಸುತ್ತಿರುವ ದರವೆಷ್ಟು;